## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.

**ಸಿ.ಸಿ. ನಂ. 2126/2021**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ನಾಗರಾಜ್ ಆರ್ ಕೆ. | ಸಿ.ಡಬ್ಲ್ಯೂ-22 |
| ತಂದೆ ಹೆಸರು | : | ಕೆಂಚಪ್ಪ | ಪಿ.ಡಬ್ಲ್ಯೂ-09 |
| ವಯಸ್ಸು | : | 47 ವರ್ಷ | |
| ಉದ್ಯೋಗ | : | ಮುಖ್ಯ ಪೇದೆ | |
| ವಾಸಸ್ಥಳ | : | ಚಳ್ಳಕೆರೆ | ದಿಃ 04.07.2026. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

2017 ರಿಂದ 2021 ರವರೆಗೆ ನಾನು ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ. ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 14.11.2019 ರಂದು ನಾನು ಠಾಣಾ ಕರ್ತವ್ಯದಲ್ಲಿರುವಾಗ ರಾತ್ರಿ 10-00 ಗಂಟೆಗೆ ಚಾಸಾ-1ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ 336/2019 ರಂತೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ಪ್ರ.ವ.ವ.ಯನ್ನು ಮೇಲಾಧಿಕಾರಿಗಳು ಹಾಗೂ ಘನ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ.

ಸಾಕ್ಷಿಗೆ ನಿಪಿಃ1 ರ ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ)ಅಂತಾ ಗುರುತಿಸಲಾಯಿತು.

ಸಾಕ್ಷಿಗೆ ಪ್ರ.ವ.ವ. ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರ.ವ.ವ. ನಿಪಿಃ 15 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ.15(ಎ)ಅಂತಾ ಗುರುತಿಸಲಾಯಿತು.

ದಿನಾಂಕ 15.11.2019 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-3 ಮತ್ತು 4 ರವರನ್ನು ಪಂಚರಾಗಿ ಬರಮಾಡಿಕೊಂಡು ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಬೆಳಿಗ್ಗೆ 11-30 ರಿಂದ 11.45 ರವರೆಗೆ ಪಂಚನಾಮೆ ಕ್ರಮ ಜರುಗಿಸಿ ಕಚ್ಚಾ ನಕಾಶೆ ತಯಾರಿಸಿ ಭಾವಚಿತ್ರವನ್ನು ತೆಗೆಯಲಾಗಿರುತ್ತದೆ .

ಸಾಕ್ಷಿಗೆ ನಿಪಿಃ2 ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಬಿ)ಅಂತಾ ಗುರುತಿಸಲಾಯಿತು.

ಸಾಕ್ಷಿಗೆ ಕಚ್ಚಾ ನಕಾಶೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಕಚ್ಚಾ ನಕಾಶೆಯನ್ನು ನಿಪಿಃ 16 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ.16(ಎ)ಅಂತಾ ಗುರುತಿಸಲಾಯಿತು.

ಸಾಕ್ಷಿಗೆ ಒಂದುದ ಭಾವಚಿತ್ರವನ್ನು ತೋರಿಸಲಾಗಿ ಸದರಿ ಭಾವಚಿತ್ರವನ್ನು ಮಹಜರ್ ಸಮಯಜದಲ್ಲಿ ತೆಗೆಯಲಾಗಿರುತ್ತದೆ ಎಂದು ನೋಡಿ ಗುರುತಿಸಿದ ಮೇರೆಗೆ, ಸದರಿ ಭಾವಚಿತ್ರವನ್ನು ನಿಪಿ.17 ಅಂತ ಗುರುತಿಸಲಾಯಿತು.

ದಿನಾಂಕ 16.11.2019 ರಂದು ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-24 ರವಗೆ ಹಸ್ತಾಂತರಿಸಿರುತ್ತೇನೆ.

**<u>ಪಾಟೀ ಸವಾಲುಃ ಶ್ರೀ ಸಿ.ವಿ., ಆರೋಪಿ ಪರ ವಕೀಲರಿಂದಃ</u>**

ದಿನಾಂಕ 14.11.2019 ರಂದು ನಾನು ಠಾಣಾ ಕರ್ತವ್ಯದಲ್ಲಿರುವಾಗ ರಾತ್ರಿ 10-00 ಗಂಟೆಗೆ ಚಾಸಾ-1ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ದಾಖಲಿಸಿರುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ದಿನಾಂಕ 15.11.2019 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-3 ಮತ್ತು 4 ರವರನ್ನು ಪಂಚರಾಗಿ ಬರಮಾಡಿಕೊಂಡು ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಬೆಳಿಗ್ಗೆ 11-30 ರಿಂದ 11.45 ರವರೆಗೆ ಪಂಚನಾಮೆ ಕ್ರಮ ಜರುಗಿಸಿ ಕಚ್ಚಾ ನಕಾಶೆ ತಯಾರಿಸಿ ಭಾವಚಿತ್ರವನ್ನು ತೆಗೆಯಲಾಗಿರುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ